ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/55/2016-17. ದಿನಾಂಕ:12-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಗೌರಮ್ಮ ಗಂಡ ಲೇಟ್ ಕೆ.ಎಂ.ಸಿದ್ದಲಿಂಗಯ್ಯ<br>2)ಶಶಿಕಲಾ ಗಂಡ ಲೇಟ್ ಕೆ.ಎಂ.ಸಿದ್ದಲಿಂಗಯ್ಯ<br>3)ಕೆ.ಎಂ.ಬಸಯ್ಯ ತಂದೆ ಹಾಲಯ್ಯ<br>ಕಾಳಾಪುರ ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೊಟ್ಟೂರು |
| ಕೂಡ್ಲಿಗಿ ತಾಲೂಕು ಕಾಳಾಪುರ ಗ್ರಾಮದ ಸನಂ 247/1. ವಿಸ್ತೀರ್ಣ 1-19. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕಾಳಾಪುರ ಗ್ರಾಮದ ಸನಂ 247/1. ವಿಸ್ತೀರ್ಣ 1-19. ಎಕ್ರೆ ಜಮೀನನ್ನು ಸದರಿ ಗ್ರಾಮದ ಕೆ.ಎಂ.ಬಸಯ್ಯ ತಂದೆ ಹಾಲಯ್ಯ ಇವರು ದಿನಾಂಕ 30-07-2015 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕಾಳಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 15-06-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಪಾಲು ವಿಭಾಗದ ಪತ್ರಕ್ಕೂ ನಮೂನೆ-21 ಕ್ಕೂ ತಾಳೆ ಇಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 47/2015-16. ದಿನಾಂಕ 15-07-2016. ರಲ್ಲಿ ಗೈರು ಮಂಜೂರು ಮಾಡಿ ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 12-09-2016 ರಂದು ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಕಾಳಾಪುರ ಗ್ರಾಮದ ಸನಂ 247/1. ವಿಸ್ತೀರ್ಣ 1-19. ಎಕ್ರೆ ಜಮೀನನ್ನು ನಮ್ಮಗಳ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ನಾವುಗಳು ಸದರಿ ಜಮೀನನ್ನು ದಿನಾಂಕ 30-07-2015 ರಂದು ಪಾಲು ವಿಭಾಗದ ಪತ್ರ ಬರೆಯಿಸಿ ಅದರ ಪ್ರಕಾರ ಅಳತೆ ಮಾಡಿಸಿ 11ಇ. ನಕ್ಷೇಯನ್ನು ಪಡೇದಿರುತ್ತೇವೆಂದು ಹಾಗೂ ಸದರಿ ಪಾಲು ಪತ್ರ ಹಾಗೂ 11ಇ. ನಕ್ಷೇ ಪ್ರಕಾರ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ 11ಇ.ನಕ್ಷೇ ಪ್ರಕಾರ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಮು.ತಿ.ನೋ:-2

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕಾಳಾಪುರ ಗ್ರಾಮದ ಸನಂ 247/1. ವಿಸ್ತೀರ್ಣ 1-19. ಎಕ್ರೆ ಜಮೀನಿನ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೇ ಪ್ರಕಾರ

| ಕ್ರಸಂ | ಹೆಸರು | ಸನಂ | ವಿಸ್ತೀರ್ಣ |
|---|---|---|---|
| 1 | 2 | 3 | 4 |
| 1 | ಗೌರಮ್ಮ ಗಂಡ ಲೇಟ್ ಸಿದ್ದಲಿಂಗಯ್ಯ | 247/1ಪೈಕಿ.<br>247/1ಪೈಕಿ.<br>247/1ಪೈಕಿ. | 0-31.<br>0-11.<br>0-17. |
| 2 | ಕೆ.ಎಂ.ಬಸಯ್ಯ ತಂದೆ ಹಾಲಯ್ಯ | 247/1ಪೈಕಿ.<br>247/1ಪೈಕಿ. | 0-43.<br>0-17. |

ಈ ಮೇಲಿನಂತೆ ಪಾಲು ವಿಭಾಗದ 11ಇ. ನಕ್ಷೇ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 12-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ ಕೊಟ್ಟೂರು

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೆ.ಎಂ.ಬಸಯ್ಯ ತಂದೆ ಹಾಲಯ್ಯ. ಗೌರಮ್ಮ ಗಂಡ ಲೇಟ್ ಕೆ.ಎಂ.ಸಿದ್ದಲಿಂಗಯ್ಯ. ಶಶಿಕಲಾ ಗಂಡ ಕೆ.ಎಂ.ಸಿದ್ದಲಿಂಗಯ್ಯ. ಕಾಳಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.